ಗೃಹ ಸಚಿವರ ಗಮನಕ್ಕೆ ತರುವುದೇನೆಂದರೆ ಇಡೀ ಕರ್ನಾಟಕದಲ್ಲಿ ಮಹಿಳೆಯರ ಮೇಲೆ ದಬ್ಬಾಳಿಕೆ ಮಾಡಬಹುದು; ಲಾಠಿ ಚಾರ್ಜ್ ಮಾಡಬಹುದು;...

ಅಧ್ಯಕ್ಷರು: ಇಲ್ಲ, ದಯಮಾಡಿ ಜನರಲೈಸ್ ಮಾಡಬೇಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಇದರ ಬಗ್ಗೆ ಪೋಲೀಸ್‌ನವರಿಗೆ ದಯವಿಟ್ಟು ಹೇಳಬೇಕು. ಮಹಿಳೆಯರ ಮೇಲೆ ಕೈ ಮಾಡುವತ್ತೇವೆಂದರೆ ಇವರಿಗೆಷ್ಟು ಧೈರ್ಯವಿರಬೇಕು ? ಇಲ್ಲಿ ಮಹಿಳೆಯರನ್ನು ರಕ್ಷಣೆ ಮಾಡುವವರಾರೂ ಇಲ್ಲವೆಂದು ಅವರು ತಿಳಿದುಕೊಂಡಿದ್ದರೆ ಅದು ನಿಜವಾಗಿಯೂ ತಪ್ಪು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನನಗೂ ಒಬ್ಬರು ತಾಯಿ ಇದ್ದಾರೆ, ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆ, ಒಬ್ಬರು ಹೆಂಡತಿ ಇದ್ದಾರೆ, ಮಹಿಳೆಯರ ಮೇಲೆ ಯಾರಾದರೂ ಪೋಲೀಸರು ದೌರ್ಜನ್ಯ ಮಾಡಿದ್ದರೆ ನಾನು ನನ್ನ ಸಹೋದರಿಯವರಿಗೆ ಭರವಸೆ ಕೊಡುತ್ತೇನೆ, ಯಾವುದೇ ಮಟ್ಟದಲ್ಲೂ ಸಹ ನನ್ನ ಹಂತದಲ್ಲಿ ಅಂತಹ ದುಷ್ಕರ್ಮಿಗಳನ್ನು, ಕೆಟ್ಟ ಕೆಲಸ ಮಾಡತಕ್ಕವರನ್ನು ಇಲಾಖೆಯಿಂದ ಡಿಸ್‌ಚಾರ್ಜ್ ಮಾಡಲು ನಾನು ಕ್ರಮ ತೆಗೆದುಕೊಳ್ಳುತ್ತೇನೆ.

MR. SPEAKER; Now we will move on to the next subject.

(2) ಬೀದರ್ ಮತ್ತು ಬಸವಕಲ್ಯಾಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ಸಾರ್ವಜನಿಕರಿಗೆ ಆಗಿರುವ ಅನಾನುಕೂಲತೆ.

ಶ್ರೀ ಸೈಯದ್ ಜುಲ್ಫಿಕಾರ್ ಹಶಮಿ (ಬೀದರ್): ಮಾನ್ಯ ಅಧ್ಯಕ್ಷರೆ, ಬೀದರ್ ಮತ್ತು ಬಸವಕಲ್ಯಾಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೆ ಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಲು ಇಚ್ಛಿಸುತ್ತೇನೆ :-

ಬೀದರ್ ನಗರ:- ಬೀದರ್ ಪಟ್ಟಣಕ್ಕೆ ಮಂಜರಾ ನದಿಯಿಂದ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. 1994ರ ಮಳೆಗಾಲದಲ್ಲಿ ಸಾಕಷ್ಟು ಮಳೆ ಬಾರದೇ ಇರುವುದರಿಂದ ಮಂಜರಾ ನದಿಯು ಬತ್ತಿ ಹೋಗಿದೆ. ಕುಡಿಯುವ ನೀರಿನ ಬವಣೆಯನ್ನು ಎದುರಿಸಲು ಬೀದರ್ ನಗರದ ಜಂಗಲ್‌ಕೋಯಿ ಹಳ್ಳಿಯಲ್ಲಿ ಹಾಲಿ ಇರುವ ಆರು ಹೆಚ್ಚು ಒರತೆಯ ಕೊಳವೆ ಬಾವಿಗಳನ್ನು ಉಪಯೋಗಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ. ಹಾಗೂ ಈ ಕೆಲಸವು ಪ್ರಗತಿಯಲ್ಲಿದೆ. ಮತ್ತು ಫಾಸ್ಟ್ ರಿಗ್ ಸಹಾಯದಿಂದ ಎರಡು ಆಳದ ಕೊಳವೆ ಬಾವಿಗಳನ್ನು ಕೊರೆಯಲು ಸಹಾ

ಕ್ರಮ ತೆಗೆದುಕೊಂಡಿದ್ದು ಇವು ಈಗ ತಾನೆ ಪೂರ್ಣಗೊಂಡಿದೆ. ಇದರಲ್ಲಿ ಒಂದು ಕೊಳವೆ ಬಾವಿ ಗಂಟೆಗೆ 1200 ಗ್ಯಾಲನ್ ಮತ್ತೊಂದು ಗಂಟೆಗೆ 3000 ಗ್ಯಾಲನ್ ನೀರಿನ ಒರತೆಯುಳ್ಳದ್ದಾಗಿದೆ. ಈ ಕೊಳವೆ ಬಾವಿಗಳನ್ನು ಉಪಯೋಗಿಸಿಕೊಳ್ಳಲು ಸೂಕ್ತ ಪಂಪ್‌ಗಳು ಹಾಗೂ ಈ ನೀರನ್ನು ಕೊಳವೆಗಳ ಮುಖಾಂತರ ವಿಸ್ತರಿಸಲು ಕ್ರಮ ಕೈ ಕೊಳ್ಳಲಾಗಿದೆ. ಮತ್ತು ಟ್ರಾಕ್‌ಗಳ ಮುಖಾಂತರ ಚರ್ಲಾಗಿ, ಜಾಂಪಾಡೆ ಜಾಗದಲ್ಲಿ ಮಂಜರಾ ನದಿಯಿಂದ ಉಂಟಾದ ಕೊಳಗಂದ ಸಿಗುವ ನೀರನ್ನು 17 ರಿಂದ 20 ಕಿ.ಮಿ. ದೂರದಿಂದ ಸಾಗಣೆ ಮುಖಾಂತರ ಒಯ್ಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಬಸವಕಲ್ಯಾಣ :- ಬಸವ ಕಲ್ಯಾಣ ಪಟ್ಟಣದ ಜನ ಸಂಖ್ಯೆಯು 1991ರ ಜನಗಣತಿಯ ಪ್ರಕಾರ 42,712 ಆಗಿರುತ್ತದೆ. ಈ ಪಟ್ಟಣಕ್ಕೆ ನೀರು ಸರಬರಾಜು ಹೆಚ್ಚು ಒರತೆಯಿರುವ ಎರಡು ಕೊಳವೆ ಬಾವಿಗಳಿಂದಲೂ ಮತ್ತು ಒಂದು ತೆರೆದ ಬಾವಿಯಿಂದ ಆಗುತ್ತಿತ್ತು. ಆದರೆ, ಈ ಬಾವಿಗಳಿಂದ ಒರತೆ ಕಡಿಮೆಯಾಗಿದೆ. ಇದಲ್ಲದೇ ಪಟ್ಟಣದಲ್ಲಿ 18 ಕೊಳವೆ ಬಾವಿಗಳಿದ್ದು ಅವುಗಳಿಗೆ ಕೈ ಪಂಪ್‌ಗಳನ್ನು ಅಳವಡಿಸಲಾಗಿದೆ. ಹಾಗೆಯೇ 8 ಕೊಳವೆ ಬಾವಿಗಳಿಗೆ ಪವರ್ ಪಂಪ್‌ಗಳನ್ನು ಅಳವಡಿಸಲಾಗಿದ್ದು ಅದರಿಂದ ಕಿರು ನೀರು ಸರಬರಾಜು ವ್ಯವಸ್ಥೆ ಮಾಡಲಾಗಿದೆ. ಇದಲ್ಲದೇ ಹೆಚ್ಚು ಒರತೆಯಿರುವ ನಾಲ್ಕು ಕೊಳವೆ ಬಾವಿಗಳಿದ್ದು ಅವುಗಳಿಗೂ ಪವರ್ ಪಂಪ್‌ಗಳನ್ನು ಅಳವಡಿಸಲಾಗಿದೆ. ಆದರೆ ಇದರಿಂದ ನೀರನ್ನು ಪಂಪ್‌ಗೆ ಪಂಪ್ ಮಾಡಲು 4.20 ಕಿ.ಮೀ. ಉದ್ದಕ್ಕೆ ಕೊಳವೆಗಳನ್ನು ಅಳವಡಿಸಬೇಕಾಗಿದ್ದು ಈ ಕೆಲಸವನ್ನು ಪ್ರಾರಂಭಿಸಬೇಕಾಗಿದೆ.

ಅಭಾವ ಪರಿಹಾರ ಕಾರ್ಯಗಳಲ್ಲಿ ಇನ್ನೂ 8 ಕೊಳವೆ ಬಾವಿಗಳನ್ನು ಕೊರೆದು ಅವುಗಳಲ್ಲಿ 5 ಬಾವಿಗಳಿಗೆ ಕೈ ಪಂಪ್‌ಗಳನ್ನು 3 ಕೊಳವೆ ಬಾವಿಗಳಿಗೆ ಪವರ್ ಪಂಪ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದ್ದು ಇದಕ್ಕೆ 3 ಲಕ್ಷ ರೂಪಾಯಿಗಳ ಖರ್ಚು ತಗಲುವ ಅಂದಾಜು ಮಾಡಲಾಗಿದೆ. ಈ ಕಾರ್ಯವನ್ನು ಶೀಘ್ರವೇ ಕೈಗೊಳ್ಳಲಾಗುವುದು.

ಅಭಾವ ಪರಿಹಾರ ಕಾಮಗಾರಿಗಳಿಂದಾಗಿ ಬೀದರ್ ಜಿಲ್ಲೆಗೆ ಸಾಕಷ್ಟು ಹಣ ಬಿಡುಗಡೆ ಮಾಡಲು ಕ್ರಮ ಕೈ ಗೊಳ್ಳಲಾಗಿದೆ. ಜಿಲ್ಲಾಧಿಕಾರಿಗಳು ಈ ಕಾರ್ಯಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಶ್ರೀ ಸೈಯದ್ ಜುಲ್ಫಿಕಾರ್ ಹಶಮಿ:- ನಮ್ಮ ಬೀದರ್ ಮತ್ತು ಬಸವಕಲ್ಯಾಣಕ್ಕೆಲ್ಲ ಹೆಚ್ಚಿನ ನೀರಿನ ತೊಂದರೆ ಇದೆ. ಸನ್ಮಾನ್ಯ ಸಚಿವರು ಬೀದರ್‌ನ ಹಣವನ್ನು ನಾನು ರಿಲೀಸ್ ಮಾಡಿದ್ದೇನೆಂದು ಹೇಳಿದ್ದಾರೆ. ಎಷ್ಟು ಹಣವನ್ನು ನಮ್ಮ ಬೀದರ್ ಪಟ್ಟಣಕ್ಕೆ ರಿಲೀಸ್ ಮಾಡಿದ್ದಾರೆ. ನಾವು ಡೇಲಿ ಬಿಲ್ಲರಿಗಿ ಮತ್ತು ಜಾಂಪಾಡ್ ವಾಟರ್ ಟ್ಯಾಂಕ್‌ನಿಂದ ನೀರು ತರುತ್ತಿದ್ದೇವೆ. ಅದಕ್ಕೆ ಡೈಲಿ 45 ಸಾವಿರ ದುಡ್ಡು ಬೇಕು. ಅರ್ಬನ್ ವಾಟರ್ ಸಪ್ಲೈ ಇಲಾಖೆಯವರು ಡೇಟೇಲಾಗಿ ತಮಗೆ ಎಸ್ಟೀಮೇಟ್ ಕೊಟ್ಟಿದ್ದಾರೆ. ತಾವು ಎಷ್ಟು ದುಡ್ಡು ರಿಲೀಸ್ ಮಾಡುತ್ತೀರಿ. ಎಷ್ಟು ಟೈಮ್‌ನಲ್ಲಿ ರಿಲೀಸ್ ಮಾಡುತ್ತೀರಿ, ಬೇಗ ಮಾಡಬೇಕು ಎಂಬುದೆ ನಮ್ಮ ವಿನಂತಿ ಇದೆ.

ಶ್ರೀ ವೈಜನಾಥ್ ಪಾಟೀಲ್:- ಪ್ರತಿ ಜಿಲ್ಲೆಗೆ ಜಿಲ್ಲಾಧಿಕಾರಿಗಳನ್ನು ನೋಡಲ್ ಆಫಿಸರ್ ಆಗಿ ಮಾಡಲಾಗಿದೆ. ಅದರಲ್ಲಿ ವಿಶೇಷವಾಗಿ ಬೀದರ್ ಸಲುವಾಗಿ ಸಾಕಷ್ಟು ಹಣ ಒದಗಿಸಲಾಗಿದೆ. ಇವತ್ತು ಸಾಯಂಕಾಲದ ಒಳಗೆ ಹಣ ಬಿಡುಗಡೆ ಆಗುತ್ತದೆ. ಕುಡಿಯುವ ನೀರು ಒದಗಿಸಲಿಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣ ಒದಗಿಸಿ ಕೊಡುತ್ತೇವೆ. ಆ ದೃಷ್ಟಿಯಿಂದ ಚಾಂಪಾಡ್ ಗ್ರಾಮದಿಂದ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಕೂಡ ಮಾಡಲಾಗಿದೆ. ಚಿಲ್ಲರಗಿಯಿಂದ ಕೂಡ ಕೆಲವು ಬೋರ್‌ವೆಲ್‌ಗಳನ್ನು ಕೂಡ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಸೈಯದ್ ಜುಲ್ಫಿಕಾರ್ ಹಶಮಿ:- 50 ಫೀಟ್ ಹೊಡೆದಿದ್ದಾರೆ. ಆದರೆ ನೀರಿಲ್ಲ.

ಅಧ್ಯಕ್ಷರು:- ಮಾಟಾಳ್ ನಾಗರಾಜ್‌ರವರೇ, ಹಶಮಿಯವರು ಮತ್ತು ವೈಜನಾಥ್ ಪಾಟೀಲ್‌ರವರು ನಮ್ಮನ್ನು ಮರೆತು ಬಿಟ್ಟಿದ್ದಾರೆ, ಅವರ ಭಾಷೆ ನಮಗೆ ಅರ್ಥವಾಗುವುದಿಲ್ಲ. ತಾವೇ ದಯ ಮಾಡಿ ಸ್ವಲ್ಪ ಎಲ್ಲಾ ತಿಳಿದುಕೊಂಡು ನನಗೆ ಸ್ವಲ್ಪ ಸಹಾಯ ಮಾಡಬೇಕು. ಅಲ್ಲಿ ಏನು ನಡೆಯುತ್ತಿದೆ ನನಗೆ ತಿಳಿಸಿ.

ಶ್ರೀ ಮಾಟಾಳ್ ನಾಗರಾಜ್:- ಇಲ್ಲ, ಅವರ ಕನ್ನಡ ನನಗೆ ಅರ್ಥವಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹಶಮಿಯವರು ಕನ್ನಡ ಕಲಿತುಕೊಂಡು ಮಾತನಾಡುತ್ತಿದ್ದಾರೆ. ತಾವು ಅಪ್ರಿಷಿಯೇಟ್ ಮಾಡಬೇಕು.

ಅಧ್ಯಕ್ಷರು:- ಅವರದೇ ಮಾತನಾಡುತ್ತಿದ್ದಾರೆ, ನನಗೆ ಏನೂ ಗೊತ್ತೆ ಆಗುತ್ತಿಲ್ಲ. ಅದಕ್ಕಾಗಿ ಮಾಟಾಳ್ ನಾಗರಾಜ್‌ರವರನ್ನು ಸಹಾಯ ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಮಾಟಾಳ್ ನಾಗರಾಜ್:- ಅವರು ಕನ್ನಡ ಮಾತನಾಡುತ್ತಿದ್ದಾರೆ ಎಂದು ಬಹಳ ನಾನು ಸಂತೋಷಭರಿತನಾಗಿದ್ದೇನೆ. ಅವರೂ ಸಹ ಇಂಗ್ಲಿಷ್ ಬಿಟ್ಟು ಕನ್ನಡಕ್ಕೆ ಬಂದಿರುವುದು ನನಗೆ ಅತ್ಯಂತ ಸಂತೋಷವಾಗಿದೆ. ಆದರೆ ಒಂದು ತಪ್ಪು ಏನಾಗಿದೆ ಅಂದರೆ ಅವರು ನಿಮ್ಮ ಮುಖವನ್ನು ನೋಡುತ್ತಿಲ್ಲ.

ಅಧ್ಯಕ್ಷರು:- ಅಪ್ಪಾದರೂ ಮಾಡಿಸಿ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್:- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಶಾಸಕರಾಗಿರುವಂತಹ ಜುಲ್ಫಿಕಾರ್ ಹಶಮಿರವರು ಬೀದರ್ ಹಾಗೂ ಬಸವಕಲ್ಯಾಣ ನಗರಕ್ಕೆ ನೀರಿನ ಅಭಾವ ಇರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿರುತ್ತಾರೆ. ಮಾನ್ಯ ಮಂತ್ರಿಗಳು ಕೂಡ ತಮ್ಮ ಪ್ರತಿ ಉತ್ತರವನ್ನು ಸಹ ಕೊಟ್ಟಿದ್ದಾರೆ. ಆದರೆ ವಿಶೇಷವಾಗಿ ಬೀದರ್ ಪಟ್ಟಣದಲ್ಲಿ ನಮ್ಮ ಗಮನಕ್ಕೆ ಬರುವಂತೆ ಎರಡು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹಣ ಬಿಡುಗಡೆ ಮಾಡುತ್ತಿದ್ದಾರೆ. ಸಿಟಿ ಮತ್ತು ಅರ್ಬನ್ ಏರಿಯಾಗೆ ದುಡ್ಡು ಬಿಡುಗಡೆ ಮಾಡಿಲ್ಲ ಎಂಬ ಅಂಶ ನಿಮ್ಮ ಗಮನಕ್ಕೆ

ಬಂದಿರುತ್ತದೆ. ಹೀಗಾಗಿ ಇಲ್ಲಿ ಕೊಳವೆ ಬಾವಿಗಳನ್ನು ತೆಗೆಯುವುದಾಗಲಿ, ಅಥವಾ ಹ್ಯಾಂಡ್ ಪಂಪ್ ಕೊಡಿಸುವುದಾಗಲಿ, ಮೋಟಾರ್ ಕೊಡಿಸುವುದಾಗಲಿ, ಯಾವುದೇ ಕಾರ್ಯಗಳು ನಡೆದಿಲ್ಲ. ಆದ್ದರಿಂದ ನಮ್ಮ ಗಮನಕ್ಕೆ ಬಂದಂತಹ ವಿಚಾರವನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಬಹಳಷ್ಟು ಹೆಣ್ಣು ಮಕ್ಕಳು ಜಿಲ್ಲಾಧಿಕಾರಿಗಳ ಎದುರುಗಡೆ ಪ್ರತಿಭಟನೆ ಮಾಡಿದ್ದಾರೆ. ಬಸವಕಲ್ಯಾಣದಲ್ಲಿ ನೀರಿನ ತೊಂದರೆ ಇದೆ. ಮತ್ತು ನಿಮ್ಮಲ್ಲಿ ಒಂದು ಅರಿಕೆ ಮಾಡಿಕೊಳ್ಳುವುದು ಏನೆಂದರೆ, ನಮ್ಮ ಜಿಲ್ಲೆಯ ಒಂದು ಜಿಯಾಲಜಿಕಲ್ ಸರ್ವೇ ಪ್ರಕಾರ 400 ಕಿ.ಮಿ. ಕೆಳಗೆ ನೀರು ಸಿಗುತ್ತದೆ. ಮೇಲೆ ನೀರು ಸಿಗುತ್ತಿಲ್ಲ. ಹಾಗಾಗಿ ನೀರಿನ ಸಮಸ್ಯೆ ಬಹುಷ ಆಗುತ್ತಿದೆ. ಇದಕ್ಕೆ ವಿಶೇಷವಾದಂತಹ ಆದ್ಯತೆ ಕೊಟ್ಟು ಸ್ಪೆಷಲ್ ಕೇಸ್ ಎಂದು ತಿಳಿದುಕೊಂಡು ಬೀದರ್ ಪಟ್ಟಣದಲ್ಲಿ ಮತ್ತು ಬಸವ ಕಲ್ಯಾಣ ಪಟ್ಟಣದಲ್ಲಿ ಹೆಚ್ಚಿನ ಕೊಳವೆ ಬಾವಿಗಳನ್ನು ತೆಗೆಯುವುದರ ಸಲುವಾಗಿ ಮತ್ತು ಮೋಟಾರ್ ಕೊಡಿಸುವುದರ ಸಲುವಾಗಿ ಕ್ರಮ ಕೈಗೊಳ್ಳಬೇಕು. ಈಗ ಇರುವಂಥ ಸಿಬ್ಬಂದಿ ಅಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಜಿಯಾಲಜಿಸ್ಟ್ ಕೂಡ ಯಾರೂ ಇಲ್ಲ. ಅಲ್ಲಿಗೆ ನಗರಾಭಿವೃದ್ಧಿ ಸಚಿವರು ಬಂದಾಗ ಹೇಳಿದೆವು. ಮುಖ್ಯ ಮಂತ್ರಿಗಳು ಬಂದಾಗ ಕೂಡ ಹೇಳಿದ್ದೇವೆ. ಹೀಗೆ ಬಹಳಷ್ಟು ಸಮಸ್ಯೆಗಳು ಎದುರಾಗುತ್ತಿವೆ. ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು:- ಹಶಮಿರವರೇ ನಿಮಗೆ ಏನು ಇನ್ನೂ ತೃಪ್ತಿ ಆಗಿಲ್ಲವೇ ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ, ಅದು ಶಾಶ್ವತ ಪರಿಹಾರವಾಯಿತು. ಆದರೆ ನಾವು ಕೇಳುವ ಪ್ರಶ್ನೆ ಏನೆಂದರೆ ನಮಗೆ ಶಾಶ್ವತ ಪರಿಹಾರ ಬೇಕಾಗಿಲ್ಲ. ಈಗ ಸ್ಕೆಲ್‌ಸಿಟಿಯಲ್ಲಿ ತುರ್ತು ಆದಂತಹ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ, ಎಷ್ಟು ಹಣವನ್ನು ಸ್ಕೇರ್‌ಸಿಟಿಗೆ ಬಿಡುಗಡೆ ಮಾಡಿದ್ದೀರಿ ? ಎಷ್ಟು ಬೋರ್ ಹಾಗೂ ಮೋಟಾರ್‌ಗಳನ್ನು ಹಾಕಿದ್ದೀರಿ ? ಇದರ ಬಗ್ಗೆ ಮಾಹಿತಿ ಇದ್ದರೆ ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು:- ಈಗ ಹೇಳಿದ್ದಾರಲ್ಲ, ಎಷ್ಟು ಹ್ಯಾಂಡ್ ಪಂಪ್ ಬೇಕಾದರೂ ಹಾಕಿಸುತ್ತೇವೆ ಎಂದು.

ಶ್ರೀ ಬಸವರಾಜ ಪಾಟೀಲ್ ಅಟೂರ್:- ನೀವು ಕಾರಾಂಜಾ ನದಿ ಮತ್ತು ಮಂಜ್ರಾ ನದಿಯ ವಿಷಯವಾಗಿ ಮಾತನಾಡುತ್ತಾ ಕುಳಿತರೆ ಅದರಿಂದ ತುಂಬಾ ತಡವಾಗುತ್ತದೆ. ಹಾಗೂ ತೊಂದರೆಯಾಗುತ್ತದೆ. ಹಾಗಾಗಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ತೀಕ್ಷ್ಣವಾದಂತಹ ಗಮನವನ್ನು ಹರಿಸಬೇಕು. ಅಲ್ಲಿ ಮೋಟಾರ್ ಕೂರಿಸುವುದಕ್ಕಾಗಲಿ, ಪೈಪ್‌ಗೆ ಆಗಲೀ ಒಟ್ಟಾರೆ ದುಡ್ಡು ಇಲ್ಲ. ಅಲ್ಲಿ ಹೇಳಬೇಕಾದರೆ....

ಅಧ್ಯಕ್ಷರು:- ದುಡ್ಡು ಇಲ್ಲದೇ ಇದ್ದರೆ ಅದು ಅವರ ಹಣೆಬರಹ, ಅವರು ಹಾಕಿಸುತ್ತಾರೆ. ನೀವು ಅಟ್ಟೂರ್‌ರವರಿಗೆ ಸಮಾಧಾನ ಮಾಡುವುದಿಲ್ಲವೇ ?

ಶ್ರೀ ಸೆಯ್ಯದ್ ಜುಲ್ಫಿಕಾರ್ ಹಶಮಿ:- ಮಾನ್ಯ ಅಧ್ಯಕ್ಷರೇ, ಅರ್ಬನ್ ವಾಟರ್ ಸಪ್ಲೈನಲ್ಲಿ ಸ್ಟಾಫ್ ಕಡಿಮೆ ಇದೆ. ಮತ್ತು ಡಿವಿಷನಲ್ ಆಫೀಸ್ ಗುಲ್ಬರ್ಗದಲ್ಲಿ ಇದೆ. ನಮ್ಮ ಬೀದರ್‌ಗೆ ಒಂದು ಡಿವಿಷನಲ್ ಆಫೀಸ್ ಬೇಕು. ಟೆಂಪೊರರಿ ಸ್ಟಾಫ್‌ನ್ನು ಹೆಚ್ಚಾಗಿ ಮಾಡಿ. ಪರ್ಮನೆಂಟ್ ಸೆಲ್ಯೂಷನ್ ಎಂದರೆ ನಮ್ಮಲ್ಲಿ ಒಂದು ಬ್ಯಾರೇಜ್ ಬಗ್ಗೆ ಟೆಂಡರ್ ಆಗಿದೆ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಕೊಟ್ಟಿರುವ ಟೆಂಡರ್ ಕ್ಯಾನ್ಸಲ್ ಆಗಿದೆ. ಆ ಬ್ಯಾರೇಜ್‌ನ್ನು ಯಾವಾಗ ನೀವು ಕಟ್ಟಿಸುತ್ತೀರಿ ?

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್:- ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ, ಮತ್ತು ಮಾನ್ಯ ಸಿಂಧ್ಯಾರವರನ್ನು ಭೇಟಿ ಮಾಡಿ ನಾವು ಮೆಮರಾಂಡಂ ಕೊಟ್ಟಿದ್ದೇವೆ. ಕೊಟ್ಟ ಮೇಲೆ ಕೂಡ ಎರಡರಡೇ ಬೋರ್ ಹೊಡೆದಿದ್ದಾರೆ. ನಾವು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದಾಗ ನಮ್ಮ ಹತ್ತಿರ ಅರ್ಬನ್ ಡೆವಲಪ್‌ಮೆಂಟ್ ಸಲುವಾಗಿ ಸಾಕಷ್ಟು ದುಡ್ಡು ಬಂದಿಲ್ಲ ಎನ್ನತಕ್ಕಂತಹ ಮಾತನ್ನು ಹೇಳುತ್ತಿದ್ದಾರೆ. ಸುಮಾರು 30 ಕಿ.ಮಿ.ಗಳಿಂದ ನಾವು ಪೈಪ್‌ಲೈನ್ ತರಬೇಕು ಜಾಂಪಾಡ್ ಅಥವಾ ಚಿಲ್ಲರಗಿಯಿಂದ ತರಬೇಕಾದರೆ ತೊಂದರೆಯಾಗುತ್ತದೆ. ಪೈಪ್‌ಲೈನ್ ಹಾಕುವುದಕ್ಕೆ ಸಾಕಷ್ಟು ಹಣ ಬಿಡುಗಡೆ ಮಾಡಿ ತ್ವರಿತ ಗತಿಯಿಂದ ಯುದ್ಧೋಪಾಯದ ವತಿಯಿಂದ ನಮ್ಮ ಬೀದರ್ ಪಟ್ಟಣದಲ್ಲಿ ಮತ್ತು ಬಸವಕಲ್ಯಾಣ ಪಟ್ಟಣಕ್ಕೆ ನೀರಿನ ವ್ಯವಸ್ಥೆ ಮಾಡುವ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಗಳು ಉಚಿತವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಮೇಲಾಗಿ ಅಲ್ಲಿ ಜಿಯಾಲಜಿಸ್ಟ್ ಯಾರು ಇರುವುದಿಲ್ಲ. ಜಿಯಾಲಜಿಸ್ಟ್ ಪಾಯಿಂಟ್ ಸೆಲೆಕ್ಷನ್ ಮಾಡಿದ ಮೇಲೆ ಬೋರ್‌ವೆಲ್ ಹಾಕುತ್ತಾರೆ. ಬೀದರ್‌ನಲ್ಲಿಲ್ಲ 25 ಮತ್ತು ಬಸವಕಲ್ಯಾಣದಲ್ಲಿ 15 ಬೋರ್‌ವೆಲ್‌ಗಳನ್ನು, ಕೊಳವೆ ಬಾವಿಗಳನ್ನು ಕೊರೆಯುವುದರ ಸಲುವಾಗಿ ತ್ವರಿತಗತಿಯಿಂತ ಕ್ರಮ ತೆಗೆದುಕೊಳ್ಳಬೇಕು. ಮೋಟಾರ್‌ಗಳ ಶಾರ್ಟೇಜ್ ಇದೆ. ಮೋಟಾರ್ ಶಾರ್ಟೇಜ್‌ನಿಂದ ನೀರಿನ ಸಮಸ್ಯೆಯನ್ನು ನಮ್ಮ ಮಹಿಳೆಯರು ಎದುರಿಸುತ್ತಿದ್ದಾರೆ. ಸುಮಾರು ನಾಲ್ಕು ಲಕ್ಷ ಜನರು ಇರುವ ಬೀದರ್ ಜಿಲ್ಲೆ ಮತ್ತು ಎರಡು ಲಕ್ಷ 60 ಸಾವಿರ ಜನಸಂಖ್ಯೆ ಹೊಂದಿರುವ ಬಸವ ಕಲ್ಯಾಣ ಪಟ್ಟಣಕ್ಕೆ ನೀರಿನ ತುಂಬಾ ತೊಂದರೆ ಇದೆ. ಇವು ಎರಡು ದೊಡ್ಡ ನಗರಗಳು ಇವೆ. ಆದ್ದರಿಂದ ಹೆಚ್ಚಿನ ಆದ್ಯತೆ ನೀಡಿ ಕೂಡಲೇ ಕ್ರಮ ಕೈಗೊಳ್ಳಬೇಕು. ಪೂರ್ಣ ಮಾಡಿ ಮತ್ತು ನಮ್ಮ ಅರ್ಬನ್ ವಾಟರ್ ಸಪ್ಲೈ ಇಲಾಖೆಯ ಯಾರೂ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಜಿಯಾಲಜಿಸ್ಟ್ ಇಲ್ಲ. ನೀವು ಈ ಎಲ್ಲಾ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅತಿ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು. ಇವತ್ತು ಬಿಡುಗಡೆ ಮಾಡುತ್ತೇನೆ ಅನ್ನುವ ಮಾತನ್ನು ಹೇಳುತ್ತಿದ್ದಾರೆ. ಇದನ್ನು ಎಂದು ಕಾರ್ಯಗತ ಮಾಡುತ್ತಾರೆ ಮತ್ತು ಇಷ್ಟು ಹಣ ಬಿಡುಗಡೆ ಮಾಡುತ್ತಾರೆ ಎಂಬ ಬಗ್ಗೆ ನಿಖರವಾಗಿ ಹೇಳಬೆಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತೇನೆ.

ಶ್ರೀ ವೈಜನಾಥ್ ಪಾಟೀಲ್:- ಮಾನ್ಯ ಸಭಾಪತಿಗಳೇ, ಈ ವರ್ಷ ಮಳೆ ಸರಿಯಾಗಿ ಆಗಲಿಲ್ಲ. ಪ್ರತಿ ವರ್ಷ ಮಂಜ್ರಾ ನದಿಯಿಂದ ಬೀದರ್‌ಗೆ ನೀರು ಕೊಡಲಾಗುತ್ತಿತ್ತು. ಅಲ್ಲಿ ಕಡಿಮೆ ಬಿದ್ದರೆ ಕಾರಂಜ ನದಿಯಿಂದ ಕೂಡ ನೀರು ಕೊಡಲಾಗುತ್ತಿತ್ತು. ಆದರೆ

ಈ ವರ್ಷ ಮಾತ್ರ ಮಾಂಜ್ರಾ ನದಿ ಸಂಪೂರ್ಣವಾಗಿ ಒಣಗಿ ಹೋಗಿದೆ. 15 ದಿವಸಕ್ಕೆ ಮೊದಲು ಮುನಿಸಿಪಲ್ ಪ್ರೆಸಿಡೆಂಟ್ ಕೆಲವು ಜನಪ್ರತಿನಧಿಗಳನ್ನು ಭೇಟಿಯಾದಾಗ ಕಾರಂಜ ನದಿಯಲ್ಲಿ ನೀರು ಇದೆ ಅದನ್ನು ನಾವು ಬಿಡಬೇಕೆಂದು ಕೇಳಿಕೊಂಡಿದ್ದರು. ಅದು ಮಂಜ್ರಾ ನದಿಗೆ ಹೋಗಿ ತಲುಪುವ ಒಳಗೆ ಕಾರಂಜದ ಡ್ಯಾಮ್ ದಲ್ಲಿದ್ದ ನೀರು ಮುಗಿದು ಹೋಯಿತು. ನಾವು ಜಾಂಪಾಡ್ ದ ನೀರು ತರುವ ಸಲುವಾಗಿ ದಾರಿಗಳ ಮೂಲಕ ವ್ಯವಸ್ಥೆ ಮಾಡುತ್ತಿದ್ದೇವೆ. ಅದಕ್ಕಿಂತ ಹೆಚ್ಚು ಇಲ್ಲಿಗೆ ಕರೆಂಟ್ ಅಭಾವದಿಂದ ಕೆಲವು ಕಡೆ ಪಂಪ್‌ಸೆಟ್‌ಗಳು ಕೆಲಸ ಮಾಡುತ್ತಿಲ್ಲ. ಎಲ್ಲಿ ಅವು ಕೆಲಸ ಮಾಡುತ್ತಿಲ್ಲ ಅಂತಹ ಕಡೆ ನಾವು ಡೀಸಲ್ ಜನರೇಟರ್ ಹಾಕಿ ಕೂಡ ನೀರು ಒದಗಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ. ಕರ್ನಾಟಕ ವಾಟರ್ ಸಪ್ಲೈ ಬೋರ್ಡ್‌ನಿಂದ ಕೆಲವು ಕಡೆ ಡೈರೆಕ್ಟ ಆಗಿ ಡಿಸ್ಟ್ರಿಕ್ಟ್ ಕಮೀಷನರ್‌ರವರನ್ನು ಸಿಟಿ ಅರ್ಬನ್ ಏರಿಯಾ ಇರಲಿ, ನೋಡಲ್ ಆಫೀಸರ್ ಎಂದು ಮಾಡಿ ಕ್ರಮ ಕೈಗೊಂಡಿದ್ದೇವೆ. ಅಥವಾ ರೂರಲ್ ಏರಿಯಾ ಇರಲಿ ಈಗ ಎಮರ್ಜೆನ್ಸಿ ಎಂದು ಎರಡು ಮೂರು ತಿಂಗಳ ಸಲುವಾಗಿ ಅಮೌಂಟ್ ಕೊರತೆ ಇರುವುದಿಲ್ಲ ಮತ್ತು ಅವರು ನೋಡಲ್ ಆಫೀಸರ್ ಆಗಿ ಎಲ್ಲಾ ಹಳ್ಳಿಗಳಿಗೆ, ಪಟ್ಟಣಗಳಿಗೆ ವ್ಯವಸ್ಥೆ ಮಾಡಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೆನೆ. ಹಾಗೆಯೇ ಬೀದರ್ ಜಿಲ್ಲಾಧಿಕಾರಿಗಳಿಗೆ, ಬೀದರ್ ಜಿಲ್ಲೆಯಲ್ಲಿರುವ ಹಳ್ಳಿ ಅಥವಾ ಪಟ್ಟಣಗಳ ವ್ಯವಸ್ಥೆ ನೋಡಿಕೊಳ್ಳುವುದಕ್ಕೆ ತಿಳಿಸಲಾಗಿದೆ. ಈಗ ಲಾತೂರ್ ಡ್ಯಾಮ್‌ನಿಂದ ಆ ನದಿಗೆ ನೀರು ಬಿಡಬೇಕೆಂದು ಮಹಾರಾಷ್ಟ್ರದಲ್ಲಿ ಸರ್ಕಾರವನ್ನು ಸಹ ಕೇಳಿಕೊಂಡಿದ್ದೆವು. ಆದರೆ, ಮಧ್ಯೆದಲ್ಲಿ ಸರ್ಕಾರ ಬದಲಾವಣೆಯಾಗಿದ್ದರಿಂದ ಸರಿಯಾದ ಕ್ರಮ ಆಗಿಲ್ಲ. ಅದರ ಸಲುವಾಗಿ ನಾನು ಕಾಂಟ್ಯಾಕ್ಟ್ ಮಾಡುತ್ತಿದ್ದೇನೆ. ಅವರು ಒಂದು ಟಿ.ಎಮ್.ಸಿ. ಅಥವಾ ಎರಡು ಟಿ.ಎಮ್.ಸಿ. ನೀರನ್ನು ಬೀದರ್ ಪಟ್ಟಣಕ್ಕೆ ಕುಡಿಯುವ ನೀರನ ಸಲುವಾಗಿ ಕೊಡಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಅವರು ರಿಪೋರ್ಟ್ ತರಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅವರು ನೀರು ಬಿಟ್ಟರೆ ಮಾಂಜ್ರಾ ನದಿಗೆ ಬರುತ್ತದೆ. ಆಗ ಬೀದರ್ ಪಟ್ಟಣಕ್ಕೆ ಕುಡಿಯುವ ನೀರನ ಸಮಸ್ಯೆ ಏನೂ ಇರುವುದಿಲ್ಲ. ಬೀದರ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟು ಇದೆ. ಅದು ನನಗೆ ಗೊತ್ತಿದೆ. ಇದಲ್ಲದೆ ಎಲ್ಲೆಲ್ಲಿ ಕೊಳವೆ ಬಾವಿಗಳನ್ನು ಹಾಕಬೇಕು ಅಲ್ಲೆಲ್ಲಾ ಹಾಕಲು ಕ್ರಮ ಕೈಗೊಳ್ಳುತ್ತಿದ್ದೇವೆ. ಕರೆಂಟ್ ದಿಂದ ಸಾಧ್ಯ ಇಲ್ಲದೆ ಹೋದರೆ ಹ್ಯಾಂಡ್ ಪಂಪ್‌ನಿಂದ ಮಾಡುವ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಎಲ್ಲಿ ವಾಟರ್ ಲೆವಲ್ ಬಹಳ ಕೆಳಗೆ ಹೋಗಿದೆ ಅಂತಹ ಕಡೆ ನಾವು ಟ್ರಕ್‌ನಿಂದ, ಟ್ಯಾಂಕರ್‌ನಿಂದ ನೀರು ಸಪ್ಲೈ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ನಾನು ಮಾನ್ಯ ಸದಸ್ಯರಿಗೆ ಹೇಳಲು ಇಷ್ಟಪಡುತ್ತೇನೆ. ಇದರಿಂದ ಅಲ್ಲಿ ಸರ್ಕಾರ ಯಾವ ರೀತ ಕೆಲಸ ಮಾಡಿಸುತ್ತಿದೆ ಎಂಬುದು ಗೊತ್ತಾಗುತ್ತದೆ. ದಯಮಾಡಿ ತಾವು ಇದರ ಬಗ್ಗೆ ಯುದ್ದೋಪಾದಿಯ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ತಾವು ಬೋರ್ ಹಾಕಿಸಬೇಕು, ಮೋಟಾರ್ ಕೂರಿಸಬೇಕು, ಅರ್ಬನ್ ವಾಟರ್ ಸಪ್ಲೈದವರಿಗೆ ಸ್ವಿಕ್ಟ್ ಆಗಿ ವಾರ್ನಿಂಗ್ ಕೊಡಬೇಕು, ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಅಧ್ಯಕ್ಷರು:- ನಾನು ಎಷ್ಟು ಪ್ರಯತ್ನ ಪಟ್ಟರೂ ನೀವು ಮಾತನಾಡುವುದು ಮತ್ತು

ಖಂಡ್ರೆ ಮಾತನಾಡುವುದು ಅರ್ಥವಾಗುವುದಿಲ್ಲ. ನನ್ನ ಕಷ್ಟ ಆದು. ಇಲ್ಲಿ ಕೆಲವರು ಹೈದರಾಬಾದ್ ಕರ್ನಾಟಕದವರಿದ್ದೀರಿ , ನಿಮ್ಮದೆಲ್ಲಾ ಅರ್ಥವಾಗುತ್ತದೆ. ಆದರೆ ಆಟ್ಟೂರು ಮತ್ತು ಖಂಡ್ರೆಯವರು ಮಾತನಾಡುವುದು ಮಾತ್ರ ಅರ್ಥವಾಗುವುದಿಲ್ಲ. ನಾವು ಏನು ಮಾಡಬೇಕು ಹೇಳಿ.

ಶ್ರೀ ವೈಜನಾಥ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಈಗ ಅಧಿಕಾರಿಗಳ ಬಗ್ಗೆ ಹೇಳುವುದಾದರೆ ಇಬ್ಬರು ಎಕ್ಸಿಕ್ಯುಟಿವ್ ಎಂಜಿನಿಯರ್ಸ್ ಗುಲ್ಬರ್ಗಕ್ಕೆ ಇರುತ್ತಾರೆ. ಮತ್ತು ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್ ಗುಲ್ಬರ್ಗಕ್ಕೆ ಇರುತ್ತಾರೆ. ಎಸ್.ಇ. ಅವರು ಎರಡು ಜಿಲ್ಲೆಯ ಸಲುವಾಗಿ ಇದ್ದಾರೆ. ಎಕ್ಸಿಕ್ಯುಟಿವ್ ಎಂಜಿನಿಯರ್ ಒಬ್ಬರು ಗುಲ್ಬರ್ಗ ಸಿಟಿ ಸಲುವಾಗಿ ಇದ್ದಾರೆ. ಮತ್ತೊಬ್ಬರು ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯ ಬೇರೆ ತಾಲ್ಲೂಕುಗಳ ಸಲುವಾಗಿ ಇರುತ್ತಾರೆ. ಸದ್ಯಕ್ಕೆ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರನ್ನು ಬೀದರ್ ಜಿಲ್ಲೆಗೆ ಹಾಕುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈಗ ಮತ್ತೊಂದು ಅಧಿಕಾರಿಗಳು ಇರುತ್ತಾ ಇಲ್ಲ. ಅದರ ಸಲುವಾಗಿ ಮೊನ್ನೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಅಲ್ಲಿದ್ದ ಎಸ್.ಇ.ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಅವರು ಇನ್ ಎಫಿಷಿಯೆಂಟ್, ಇರುವುದಿಲ್ಲ, ಹೀಗೆ ಬಹಳಷ್ಟು ಕಂಪ್ಲೆಂಟ್ ಇದ್ದವು. ಆ ದೃಷ್ಟಿಯಿಂದ ನಾವು ಅವರನ್ನು ರಿಮೂವ್ ಮಾಡಿದ್ದೇವೆ. ಈಗ ಅಲ್ಲಿಗೆ ಹೊಸಬರನ್ನು ತಂದು ಹಾಕಿದ್ದೇವೆ. ತಾವೂ ಕೂಡ ಇದಕ್ಕೆ ಸಹಕರಿಸಬೇಕು, ತಾವೂ ಶಾಸಕರು ಇದ್ದೀರಿ; ಯಾರೂ ಜಾಗದಲ್ಲಿ ಇರುವುದಿಲ್ಲ, ಅವರ ವಿರುದ್ಧ ಕ್ರಮ ತೆಗೆದುಕೊಂಡಿದ್ದೇವೆ. ಈಗಲೂ ಸಹ ತೆಗೆದುಕೊಳ್ಳುತ್ತೇವೆ, ಮುಂದೇನೂ ಸಹ ಯಾರೇ ಅಧಿಕಾರಿಗಳು ಹಾಗೆ ಮಾಡಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು:- ಈಗ ಶ್ರೀಯುತರುಗಳಾದ ಯಡಿಯೂರಪ್ಪ, ಖಮರುಲ್ ಇಸ್ಲಾಂ, ಎಸ್.ರಾಜೇಂದ್ರನ್ ಹಾಗೂ ಡಿ.ಕೆ.ಶಿವಕುಮಾರ್ ಅವರ ಗಮನ ಸೆಳೆಯುವ ಸೂಚನೆಗೆ ಸಹಕಾರ ಸಚಿವರ ಪರವಾಗಿ ಮಾನ್ಯ ದೇಶಪಾಂಡೆಯವರು ಉತ್ತರ ಕೊಡುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಸಹಕಾರ ಸಚಿವರು ಇಲ್ಲ,ಆದುದರಿಂದ ನೆಕ್ಸ್ಟ್ ಟೈಂ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು:- ನೀವು ನಮಗೆ ತಿಳಿಸಿದ್ದುದು ನಾನೇ ಉತ್ತರ ಹೇಳುತ್ತೇನೆ ಎಂದು.

ಶ್ರೀ ಆರ್.ವಿ.ದೇಶಪಾಂಡೆ:- ಅವರು ಫೈರ್ ಆಕ್ಸಿಡೆಂಟ್ ಏನೋ ಆಗಿದೆ ಎಂದು ಹೋಗಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಯಾವಾಗ ಅಪ್ಪಣೆ ಕೊಟ್ಟಾಗ

ಬೇಕಾದರೂ ತೆಗೆದುಕೊಳ್ಳೋಣ. ಇಲ್ಲಿ ಪ್ರಶ್ನೆ ಇರುವುದು 31.3.1995ರ ಒಳಗಡೆ ಈ ಬಡ್ಡಿ ಬಗ್ಗೆ ರಿಲೀಫ್ ಸಿಕ್ಕುವುದಕ್ಕೆ ಲಾಸ್ಟ್ ಡೇಟ್ ಎಂದು ಹೇಳಿದ್ದೀರಿ. ಆದುದರಿಂದ ಇದು ಅತ್ಯಂತ ಪ್ರಮುಖವಾಗಿರುವುದರಿಂದ ನಿಮಗೆ ಇದರ ಬಗ್ಗೆ ಸಾಕಷ್ಟು ಅನುಭವ ಇದೆ. ಚರ್ಚೆ ಪ್ರಾರಂಭವಾದರೆ ಅಷ್ಟರಲ್ಲಿ ಅವರು ಬರಬಹುದು.

ಶ್ರೀ ಆರ್.ವಿ.ದೇಶಪಾಂಡೆ :- ಆಯಿತು.

(3) ರೈತರ ಸಾಲದ ಮೇಲಿನ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರ ಕೈಗೊಂಡಿರುವ ನಿರ್ಧಾರ.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು):- ರೈತರ ಸಾಲದ ಮೇಲಿನ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರ ಕೈಗೊಂಡಿರುವ ನಿರ್ಧಾರದ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ (ಸಹಕಾರ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ:-

ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿನ ರೈತರು ಬರ ಮತ್ತು ಪ್ರಕೃತಿ ವಿಕೋಪಕ್ಕೆ ತುತ್ತಾಗಿರುತ್ತಾರೆ. ಇದರಿಂದಾಗಿ ರೈತರು ತುಂಬಾ ನಷ್ಟಕ್ಕೆ ಈಡಾಗಿದ್ದು, ಕೇಂದ್ರ ಸರ್ಕಾರವು ಸಾಕಷ್ಟು ಪರಿಹಾರ ನೀಡದ ಕಾರಣ ರೈತರಿಗೆ ಸಾಕಷ್ಟು ಪರಿಹಾರ ನೀಡಲಾಗಿರುವುದಿಲ್ಲ. ಆದುದರಿಂದ ರೈತರು ಋಣಗ್ರಸ್ಥರಾಗಿರುತ್ತಾರೆ. ಆದುದರಿಂದ ರೈತರಿಗೆ ಪರಿಹಾರ ನೀಡಲು ಸರ್ಕಾರು ಬಡ್ಡಿ ಮನ್ನಾ ಮತ್ತು ಬಡ್ಡಿ ರಿಯಾಯ್ತಿ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ಈ ಯೋಜನೆಯ ವಿವರ ಕೆಳಕಂಡಂತೆ ಇರುತ್ತದೆ :- ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ ಪಡೆದ ಅಲ್ಪಾವಧಿ, ಮಧ್ಯಮಾವಧಿ, ಮತ್ತು ಮಧ್ಯಮಾವಧಿ (ಪರಿವರ್ತಿತ) ಸಾಲ ಹಾಗೂ ದೀರ್ಘಾವಧಿ ಸಾಲವನ್ನು ದಿನಾಂಕ 31ನೇ ಮಾರ್ಚ್ 1995ರಂದು ಅಥವಾ ಅದರ ಒಳಗೆ ಮರು ಪಾವತಿ ಮಾಡಿದಲ್ಲಿ ಅಂತಹ ರೈತರಿಗೆ ಸಾಲದ ಮೇಲಿನ ಬಡ್ಡಿಯನ್ನು ಕೆಳಕಂಡಂತೆ ಮನ್ನಾ ರಿಯಾಯಿತಿ ಮಾಡಲು ಸರ್ಕಾರ ಆದೇಶಿಸಿದೆ :

(1) ದಿನಾಂಕ 31ನೇ ಮಾರ್ಚ್ 1995ರಂದು ಅಥವಾ ಅದರೊಳಗೆ ಮರು ಪಾವತಿ ಮಾಡಿದ ಎಲ್ಲಾ ಅಲ್ಪಾವಧಿ, ಮಧ್ಯಮಾವಧಿ, ಮಧ್ಯಮಾವಧಿ (ಪರಿವರ್ತಿತ) ಸುಸ್ತಿ ಸಾಲದ ಮೇಲಿನ ಬಡ್ಡಿಯನ್ನು ಪೂರ್ತಿಯಾಗಿ ಮನ್ನಾ ಮಾಡಲಾಗಿದೆ.

(2) 1994-95ನೇ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಬೆಳೆಗೆ ವಿತರಿಸಿದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ನಿಗದಿತ ಅವಧಿಯೊಳಗೆ ಮರು